ಎಂದು ಕನಸು ಕಂಡಿದ್ದರು. ಅಪ್ಪ ಹರವೀರ್ ಸಿಂಗ್ ನೆಹ್ವಾಲ್ ಕೃಷಿ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಅವರೂ ವಿಶ್ವವಿದ್ಯಾಲಯ ಮಟ್ಟದಲ್ಲಿ ಹೆಸರು ಮಾಡಿದ ಬ್ಯಾಡ್ಮಿಂಟನ್ ಆಟಗಾರ.

ಅಪ್ಪ–ಅಮ್ಮ ಬ್ಯಾಡ್ಮಿಂಟನ್ ಆಡುತ್ತಿದ್ದರೆ ಪುಟಾಣಿ ಮಗಳು ಅದನ್ನು ಗಮನವಿಟ್ಟು ನೋಡುತ್ತಿದ್ದಳು. ಎಷ್ಟೋ ಸಲ ಅವರಿಬ್ಬರೂ ಆಟದಲ್ಲಿ ಮೈಮರೆತಿದ್ದಾಗ ಅಲ್ಲೆಲ್ಲೋ ಮೂಲೆಯಲ್ಲೇ ನೋಡುತ್ತಾ ನೋಡುತ್ತಾ ಸೈನಾ ನಿದ್ರೆಗೆ ಜಾರಿದ್ದೂ ಇದೆ. ಅಂದರೆ ಈ ಹುಡುಗಿಗೆ ಬ್ಯಾಡ್ಮಿಂಟನ್ ಎನ್ನುವುದು ಬಾಲ್ಯ, ಕನಸು, ಜೋಗುಳ, ಅಪ್ಪ–ಅಮ್ಮನ ಮಮತೆಯ ಕಾಣಿಕೆ ಎಲ್ಲವೂ ಹೌದು.

ಅಪ್ಪನಿಗೆ ವರ್ಗಾವಣೆಯಾದದ್ದೇ ಹೈದರಾಬಾದ್‌ಗೆ ಬಂದರು. ಹೊಸ ಊರು. ಅಲ್ಲಿ ಭಾಷೆಯ ಸಮಸ್ಯೆ ಅಷ್ಟೇನೂ ಇರಲಿಲ್ಲವಾದರೂ, ಸೈನಾಗೆ ತೆಲುಗು ಕಲಿಯಬೇಕೆಂಬ ಉಮೇದು. ಎಂಟನೇ ವಯಸ್ಸಿನಲ್ಲೇ ಬ್ಯಾಡ್ಮಿಂಟನ್ ಅನ್ನು ಸ್ಥಳೀಯ ಆಟಗಾರ್ತಿಯರ ಜತೆ ಆಡತೊಡಗಿದಳು. ರ‍್ಯಾಕೆಟ್ ಮೇಲೆ ಒಂಬತ್ತನೇ ವಯಸ್ಸಿಗೇ ಹಿಡಿತ ಸಿಕ್ಕಿತು. ಅಷ್ಟು ಹೊತ್ತಿಗೆ ತೆಲುಗಿನ ಎಷ್ಟೋ ಪದಗಳು ನಾಲಗೆ ಮೇಲೆ ಸುಲಲಿತ. ಮನೆಯಲ್ಲಿ ಹರಿಯಾಣ್ವಿ, ಶಾಲೆಯಲ್ಲಿ ತೆಲುಗು, ರಸ್ತೆಯಲ್ಲಿ ಹೈದರಾಬಾದಿ ಹಿಂದಿ ಎಲ್ಲವನ್ನೂ ತನ್ನದಾಗಿಸಿಕೊಂಡ ಸೈನಾ ರಕ್ತಗತವಾಗಿದ್ದ ಬ್ಯಾಡ್ಮಿಂಟನ್‌ನಿಂದ ಯಾವ ಹಂತದಲ್ಲೂ ವಿಮುಖಳಾಗಲಿಲ್ಲ. ಅಪ್ಪ ಕೂಡ ಮಗಳ ಕಲಿಕೆ ಚೆನ್ನಾಗಿರಲಿ ಎಂದು ತಮ್ಮ ಭವಿಷ್ಯ ನಿಧಿಯ ಹಣವನ್ನೂ ಮಗಳ ವರ್ತಮಾನದ ಆಟಕ್ಕೆ ವಿನಿಯೋಗಿಸಿದರು.

2006ರಲ್ಲಿ ಸೈನಾ 19 ವರ್ಷದೊಳಗಿನವರ ಆಟದಲ್ಲಿ ದೇಶದಲ್ಲೇ ಚಾಂಪಿಯನ್ ಆಗಿ ಹೊಮ್ಮಿದಾಗ ತಾಯಿಯ ದೀರ್ಘಕಾಲದ ಕನಸು ನನಸಾದಂತಾಯಿತು. ಏಷ್ಯನ್ ಸ್ಯಾಟಲೈಟ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಎರಡು ಸಲ ಚಾಂಪಿಯನ್ ಆಗಿ, ಆ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡಾಗ ಆಕೆಯ ಗಟ್ಟಿತನ ರುಜುವಾತಾಗಿತ್ತು. ಫಿಲಿಪ್ಪೀನ್ಸ್ ಓಪನ್ ಗೆದ್ದ ಭಾರತದ ಎರಡನೇ ಹೆಣ್ಣುಮಗಳೆಂಬ ಗೌರವ ಸಂದದ್ದು ವಿಶೇಷ. ಇವೆಲ್ಲಕ್ಕೂ ಕಳಸವಿಟ್ಟಂತೆ 2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಕೊರಳನ್ನು ಅಲಂಕರಿಸಿತು.

2014ರಲ್ಲಿ ಚೈನಾ ಸೂಪರ್ ಸೀರೀಸ್‌ನಲ್ಲಿ ಗೆಲುವು ಸಾಧಿಸಿದ ಮೇಲೆ ಆತ್ಮಬಲ ಇನ್ನೂ ಹೆಚ್ಚಾಯಿತು. ಆಗಲೇ ಅವರ ಕಣ್ಣು ಮುಂದಿನ ಒಲಿಂಪಿಕ್ಸ್ ಪ್ರದರ್ಶನದ ಕುರಿತು ಬೆರಗು ಮೂಡಿಸಿಕೊಳ್ಳಲಿಕ್ಕೆ ಪ್ರೇರಣೆಯಾಗಿರಬೇಕು. ಅದೇ ಕಾಲಘಟ್ಟದಲ್ಲಿ ಅವರು ಬೆಂಗಳೂರಿನ ಪಡುಕೋಣೆ ಅಕಾಡೆಮಿ ಕಡೆಗೆ ಮುಖಮಾಡಿ ನಿಂತದ್ದು.


ನೆಚ್ಚಿನ ಶಿಷ್ಯೆಯರಾದ ಸೈನಾ ಹಾಗೂ ಸಿಂಧು ನಡುವೆ ಗೋಪಿಚಂದ್

ಗೋಪಿಚಂದ್ ತಮ್ಮ ಪುಸ್ತಕದಲ್ಲಿ ಆ ಸಂದರ್ಭವನ್ನು ಭಾವುಕರಾಗಿ ಸ್ಮರಿಸಿಕೊಂಡಿದ್ದಾರೆ. ‘ನಾನು ಅವಳನ್ನು (ಸೈನಾ) ಬಿಟ್ಟು ಹೋಗಬೇಡ ಎಂದು ಪರಿಪರಿಯಾಗಿ ಕೇಳಿಕೊಂಡೆ. ಅವಳು ಕರಗಲಿಲ್ಲ. ಅದ್ಯಾಕೆ ಆ ನಿರ್ಣಯ ತೆಗೆದುಕೊಂಡಳು ಎನ್ನುವುದೇ ಗೊತ್ತಾಗಲಿಲ್ಲ. ಅವಳು ನನ್ನ ಅಕಾಡೆಮಿ ತೊರೆದು ಹೋದದ್ದು ನಮ್ಮಿಬ್ಬರ ದೃಷ್ಟಿಯಿಂದಲೂ ಒಳ್ಳೆಯ ನಿರ್ಣಯವಾಗಿರಲಿಲ್ಲ’ ಎಂದು ಬರೆದುಕೊಂಡಿದ್ದಾರೆ.

ಪಿ.ವಿ. ಸಿಂಧು ಕಡೆಗೆ ಗೋಪಿಚಂದ್ ಲಕ್ಷ್ಯ ಹೆಚ್ಚಾಗಿದ್ದ ಕಾರಣ ಸೈನಾ ಅಕಾಡೆಮಿ ಬದಲಿಸಿದ್ದು ಎಂಬ ಅಭಿಪ್ರಾಯವೂ ಇದೆ. ಇದಕ್ಕೂ ಗೋಪಿಚಂದ್ ಸ್ಪಷ್ಟನೆ ನೀಡುವ ಧಾಟಿಯಲ್ಲಿ ಹೀಗೆ ಬರೆದಿದ್ದಾರೆ: ‘2012ರಿಂದ 2014ರ ಅವಧಿಯಲ್ಲಿ ಸಿಂಧು ಗಣನೀಯ ಸಾಧನೆ ಮಾಡಿದಳು. ಸಹಜವಾಗಿಯೇ ಅವಳ ತರಬೇತಿಯ ಕಡೆಗೆ ಗಮನ ಕೊಡಲೇಬೇಕಿತ್ತು. ಹಾಗಂತ ಸೈನಾಳನ್ನು ನಾನು ನಿರ್ಲಕ್ಷಿಸಿದೆ ಎಂದರ್ಥವಲ್ಲ’.

ಸ್ವಪ್ರತಿಷ್ಠೆಯಾಗಿಯೋ ಅಥವಾ ಅತಿ ಭಾವುಕತೆಯಲ್ಲೋ, ‘ಪ್ರಕಾಶ್ ಪಡುಕೋಣೆ ಅವರಾದರೂ ಸೈನಾ ತಮ್ಮಲ್ಲಿಗೆ ಬರುವುದನ್ನು ತಡೆಯಬೇಕಿತ್ತು. ಅವರು ಒಮ್ಮೆಯೂ ನನ್ನ ಬಗೆಗೆ ಒಳ್ಳೆಯ ಮಾತನ್ನಾಡಿಲ್ಲ’ ಎಂದೂ ಗೋಪಿಚಂದ್ ಬರೆದಿರುವುದು ಬ್ಯಾಡ್ಮಿಂಟನ್ ವಲಯದಲ್ಲಿ ಒಂದಿಷ್ಟು ಚರ್ಚೆಗಳನ್ನು ಹುಟ್ಟುಹಾಕಿದೆ. ತಾವಾಗಿಯೇ ಸೈನಾಳನ್ನು ಪುಸಲಾಯಿಸಿಯೇನೂ ಅಕಾಡೆಮಿಗೆ ಕರೆದುಕೊಳ್ಳಲಿಲ್ಲ ಎಂದು ಪ್ರಕಾಶ್ ಪಡುಕೋಣೆ ಕೂಡ ಸಾಮಾಜಿಕ ಜಾಲತಾಣದಲ್ಲಿ ಪ್ರತಿಕ್ರಿಯೆ ಬರೆದುಕೊಂಡಿದ್ದಾರೆ.




ಮತ್ತೊಬ್ಬ ಆಟಗಾರ್ತಿ ಜ್ವಾಲಾ ಗುಟ್ಟಾ ಗೋಪಿಚಂದ್ ಅಳಲನ್ನೇ ಪ್ರಶ್ನಿಸಿದ್ದಾರೆ. ಒಂದು ಕಾಲದಲ್ಲಿ ಇದೇ ಆಟಗಾರ ಬೆಂಗಳೂರಿನ ಪಡುಕೋಣೆ ಅಕಾಡೆಮಿಯಲ್ಲಿ ಕಲಿತವರೇ ಅಲ್ಲವೇ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಅಭಿಪ್ರಾಯ ದಾಖಲಿಸಿ, ಅದಕ್ಕೆ ಪರವಿರೋಧ ಪ್ರತಿಕ್ರಿಯೆಗಳನ್ನೂ ಸಂಪಾದಿಸಿದ್ದಾಗಿದೆ.

ಸೈನಾಗೆ ತಾವು ಅನುಭವಿಸಿದ ಏರಿಳಿತ ಎಂಥದು ಎಂಬ ಸ್ಪಷ್ಟ ಅರಿವಿದೆ. ಪ್ರಕಾಶ್ ಪಡುಕೋಣೆ ಅಕಾಡೆಮಿಗೆ ಹೋದಮೇಲೆ ಅವರು ಒಲಿಂಪಿಕ್ಸ್‌ನಲ್ಲಿ ಗಾಯಗೊಂಡು ಹೊರಬಂದರು. ಶಸ್ತ್ರಚಿಕಿತ್ಸೆಗೆ ಒಳಗಾದರು. ಆ ಕೆಟ್ಟ ಗಳಿಗೆಯಲ್ಲಿ ಅವರಿಗೆ ಹಳೆಯ ಗುರು ಸಹಜವಾಗಿಯೇ ನೆನಪಾದರು. 2017ರಲ್ಲಿ ಗೋಪಿಚಂದ್ ಬಳಿಗೇ ಮರಳಿದರು. ಸೈನಾ ಪತಿ ಪಿ. ಕಶ್ಯಪ್ ಈ ಎಲ್ಲ ಸಂದರ್ಭಗಳಿಗೂ ಸಾಕ್ಷಿಯಾದವರು. ಅವರಿಗೂ ಸರಿ–ತಪ್ಪುಗಳ ಧ್ವನಿ ಚೆನ್ನಾಗಿ ಗೊತ್ತಿದೆ. ತನ್ನ ಪತ್ನಿ ಹರಿಯಾಣದ ಗಟ್ಟಿಗಿತ್ತಿ ಎಂದೇ ಒತ್ತಿಹೇಳುವ ಅವರು, ಗೋಪಿಚಂದ್ ಎದುರು ಒಮ್ಮೆ ಕ್ಷಮೆ ಕೇಳಿಬಿಡಬಹುದಿತ್ತೇನೋ ಎಂದೂ ಹೇಳಿದ್ದಾರೆ.

ಅದೆಲ್ಲ ಏನೇ ಇರಲಿ, ಗೋಪಿಚಂದ್ ಮನೋನಂದನದ ಹೊಯ್ದಾಟಗಳಿರುವ ಪುಸ್ತಕ ಬಿಡುಗಡೆಗೆ ಮೊದಲೇ ಸಾಕಷ್ಟು ಆರೋಗ್ಯಕರ ಚರ್ಚೆಯನ್ನಂತೂ ಹುಟ್ಟುಹಾಕಿದೆ. ಇನ್ನೊಂದು ಒಲಿಂಪಿಕ್ಸ್ ಎದುರಲ್ಲಿ ಕಾಣುತ್ತಿದೆ. ಹೀಗಿರುವಾಗ ಹಳೆಯ ಗಾಯದ ಗುರುತನ್ನು ಮತ್ತೆ ಕೆರೆಯುತ್ತಾ ಕೂರುವುದು ತರವಲ್ಲ ಎಂದು ಎಚ್ಚರಿಸುತ್ತಿರುವ ಕ್ರೀಡಾ ಸಹೃದಯರೂ ಇಲ್ಲಿ ಉಂಟು.

ಸಿಂಧು ಹೈದರಾಬಾದಿನ ಹುಡುಗಿ. ಸೈನಾ ಹರಿಯಾಣದ ಬೆಡಗಿ. ಇಬ್ಬರೂ ಬ್ಯಾಡ್ಮಿಂಟನ್‌ಗೆ ಘನತೆ ತಂದುಕೊಟ್ಟವರೇ. ಕೊರೆಯುವ ಚಳಿಯಲ್ಲೂ ಇವರ ಕನಸುಗಳ ನೇವರಿಸುತ್ತಾ ನಿಂತ ಗೋಪಿಚಂದ್ ಮಹಾಗುರುವೇ ಹೌದು. ಸದಾ ತಣ್ಣಗೆ ಇರುವ ಅವರು ಎಂದೋ ಆದ ಬೇಸರವನ್ನು ಪ್ರಾಮಾಣಿಕವಾಗಿ ಹೇಳಿಕೊಂಡಿರುವುದು ಮನುಷ್ಯಸಹಜವೇ ಹೌದು.